ಯೂ..." ಎನ್ನುತ್ತ ಹಹ್ಹಹ್ಹಾ ಎಂದು ಗಹಗಹಿಸಿ ನಕ್ಕಾಗ ಸ್ವಲ್ಪ ನಿರಾಳವಾದೆ.

ಬಿದ್ದ ಮರವನ್ನು ಪರೀಕ್ಷಿಸಿ ಡಗ್ ಮತ್ತು ಅವನೊಂದಿಗೆ ಬಂದಿದ್ದ ಸಂಗಡಿಗ ಮಾತನಾಡಿ ಮರದ ಮೇಲೆ ಗುರುತು ಹಾಕಿಕೊಂಡರು. ನಂತರ ಏನೂ ತಡಮಾಡದೇ ವಿದ್ಯುತ್‌ಚಾಲಿತ ಚೈನ್ ಸಾ ಮಷಿನನ್ನು ಟ್ರಕ್ಕಿನಿಂದ ಹೊತ್ತುಕೊಂಡು ಬಂದು ಮರದ ಕಾಂಡವನ್ನು ತುಂಡು ತುಂಡು ಮಾಡಿ ಟ್ರಕ್ಕಿನ ಹಿಂಭಾಗಕ್ಕೆ ಸಾಗಿಸಿದರು. ಘಂಟೆಗಳ ಅಂತರದಲ್ಲಿ ಇಡೀ ಮರ ಡಗ್‌ನ ಟ್ರಕ್ಕಿಗೆ ಸ್ಥಳಾಂತರಗೊಂಡಿತು. ಭಾರ ಹೊತ್ತು ಡಗ್ ಮತ್ತು ಅವನ ಸಂಗಡಿಗ ಇಬ್ಬರೂ ಚಳಿಯಲ್ಲೂ ಬೆವರುತ್ತಿದ್ದರು. ಕುಡಿಯಲು ನೀರೇನಾದರೂ ಬೇಕೆ ಎಂದು ಕೇಳಿದೆ. "ನೋಪ್, ವೀ ಕ್ಯಾರಿ ಅವರ್ ಓನ್ ವಾಟರ್ ಎಹ್" ಎನ್ನುತ್ತ, "ದ್ಯಾಟ್ ವಿಲ್ ಬಿ ಒನ್ ಥೌಸಂಡ್ ಟೂ ಹನ್‌ಡ್ರೆಡ್ ಡಾಲರ್ಸ್" ಎಂದು ರಿಶೀದಿ ಹರಿದು ಕೊಟ್ಟ. ಪರ್ಸಿನಿಂದ ಕಾರ್ಡು ತೆಗೆದುಕೊಟ್ಟು ಅವನು ಸ್ವೈಪ್ ಮಾಡುತ್ತಿದ್ದ ಅಂತರದಲ್ಲೇ ಸಾವಿರದಾ ಎರಡುನೂರು ಗುಣಿಲೆ ಎಪ್ಪತ್ತು ಎಂದುಕೊಳ್ಳುವುದನ್ನು ಪ್ರಯತ್ನಪೂರ್ವಕವಾಗಿ ತಡೆಹಿಡಿದೆ, ಆದರೆ ಯಶಸ್ವಿಯಾಗಲಿಲ್ಲ.

ಕ್ರೆಡಿಟ್ ಕಾರ್ಡನ್ನು ವಾಪಸ್ಸು ಮಾಡುತ್ತ ಡಗ್, "ನಮ್ಮ ಟ್ರೀ ಸರ್ವಿಸಸ್‌ನ ಜಾಹೀರಾತಿನ ಪ್ಲಕಾರ್ಡನ್ನು ನಿಮ್ಮ ಮನೆಯ ಮುಂದೆ ಮಣ್ಣಿನಲ್ಲಿ ನೆಡಬಹುದೇ?" ಅಂತ ಕೇಳಿದ. ಅದರ ಮೇಲೂ ಟ್ರಂಪ್ ಇಲ್ಲದಿದ್ದರೆ ಸಾಕಪ್ಪ ಅಂತ ಪ್ರಾರ್ಥಿಸುತ್ತ ಒಪ್ಪಿಗೆ ನೀಡಿದೆ. "ನನ್ನ ಸ್ನೇಹಿತೆಯೊಬ್ಬಳು ನರ್ಸರಿ ನಡೆಸುತ್ತಾಳೆ. ಚಳಿಗಾಲ ಮುಗಿದು ಸ್ಪ್ರಿಂಗಿನಲ್ಲಿ ಹೊಸ ಪೈನ್ ಗಿಡವನ್ನು ತಂದು ಬೇಕಿದ್ದರೆ ಕೊಡುತ್ತೇನೆ. ಹಿತ್ತಿಲಲ್ಲಿ ಈಗ ಅಷ್ಟೊಂದು ಜಾಗವಿದೆಯಲ್ಲ" ಎನ್ನುತ್ತ ಎಂಜಿನ್ ಶುರು ಮಾಡಿದ.

ಬಿದ್ದ ಮರಗಳ ನೆನಪುಗಳಿರುವಲ್ಲೇ ಹೊಸ ಸಸಿಗಳನ್ನು ನೆಡುವ ವಿಚಾರ ಬೆಳಗಿನಿಂದ ಅನ್ಯಮನಸ್ಕಳಾಗಿದ್ದ ನನಗೆ ಖುಷಿಕೊಟ್ಟಿತು. ಕಿಟಕಿಯಿಂದ ನೋಡಿದರೆ ಬ್ರಿಯಾನಾಳ ಮನೆ ಈಗ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅವಳ ಮನೆಯ ಡ್ರೈವ್ ವೇಯಲ್ಲಿ ಎರಡು ಕಾರುಗಳು ಒಂದರ ಹಿಂದೆ ಒಂದು ಬಂದು ನಿಂತದ್ದು ಕಾಣಿಸಿತು. ಒಂದು ಕಾರಿನಿಂದ ಮಧ್ಯವಯಸ್ಕ ಮಹಿಳೆಯೊಬ್ಬರು ಕೈಯಲ್ಲಿ ಫೈಲು ಹಿಡಿದುಕೊಂಡು ಇನ್ನೊಂದು ಕಾರಿನ ಬಾಗಿಲು ತೆಗೆದರು. ಆ ಕಾರಿನಿಂದ ಕೈಕೈಹಿಡಿದುಕೊಂಡ ಜೋಡಿಯೊಂದು ಇಳಿದು ಮನೆಯನ್ನು ನೋಡುತ್ತ ಏನೇನೋ ಮಾತನಾಡಲು ತೊಡಗಿದರು.

ಆ ಕಾರಿನ ನಂಬರ್ ಪ್ಲೇಟು ನ್ಯೂಯಾರ್ಕ್ ರಾಜ್ಯದ್ದಾಗಿತ್ತು. ಕೋವಿಡ್‌ನಿಂದ ವರ್ಷವಿಡೀ ಮನೆಯಲ್ಲೇ ಉಳಿಯಬೇಕಾಗಿ ಬಂದು ನ್ಯೂಯಾರ್ಕ್ ನಗರದ ಮನೆಗಳ ದುಬಾರಿ ಬಾಡಿಗೆಯನ್ನು ಭರಿಸಲಾಗದೇ ಪಟ್ಟಣಿಗರೆಲ್ಲ ನ್ಯೂಜರ್ಸಿಯ ಸಣ್ಣ ಊರುಗಳಲ್ಲಿ ಬಿಡಾರ ಹುಡುಕುತ್ತಿದ್ದ ಸಂಗತಿಯನ್ನು ಪತ್ರಿಕೆಯಲ್ಲಿ ಓದಿದ್ದೆ. ಇವರೂ ಹಾಗೆಯೇ ಬಂದವರಿರಬೇಕು ಅಂದುಕೊಂಡೆ.

ಅರ್ಧಘಂಟೆಯ ನಂತರ ಅವರೆಲ್ಲ ಹೊರಟು ಹೋದ ಮೇಲೆ ಆ ತನಕ ಬ್ರಿಯಾನಾಳದ್ದಷ್ಟೇ ಆಗಿದ್ದ ಆ ಮನೆಯನ್ನು ಕೊನೆಯ ಬಾರಿಗೆ ಒಮ್ಮೆ ಕಣ್ತುಂಬಿಕೊಂಡೆ. ಅದಾಗಲೇ ಆಗಸದಿಂದ ಹತ್ತಿಯ ತುಣುಕುಗಳಂತೆ ಮಂಜಿನ ಹನಿಗಳು ತೇಲುತ್ತ ಬಂದು ನೆಲವ ತೊಯ್ಯಿಸಲು ತೊಡಗಿದ್ದವು.

**ಕಾವ್ಯಾ ಕಡಮೆ**

ಉತ್ತರ ಕನ್ನಡ ಜಿಲ್ಲೆಯ ಕಡಮೆಯವರು. ಸದ್ಯ ಅಮೆರಿಕದ ನ್ಯೂಜೆರ್ಸಿಯಲ್ಲಿ ವಾಸ. ಪ್ರಕಟಿತ ಕೃತಿಗಳು: 'ಧ್ಯಾನಕೆ ತಾರೀಖಿನ ಹಂಗಿಲ್ಲ', 'ಜೀನ್ಸು ತೊಟ್ಟ ದೇವರು' (ಕವನ ಸಂಕಲನಗಳು), 'ಪುನರಪಿ' (ಕಾದಂಬರಿ), 'ಆಟದೊಳಗಾಟ ಮತ್ತು ಡೋರ್ ನಂಬರ್ ಎಂಟು' (ನಾಟಕಗಳು), 'ದೂರ ದೇಶವೆಂಬ ಪಕ್ಕದ ಮನೆ' (ಪ್ರಬಂಧಗಳು).